# ಕರ್ನಾಟಕ ಸರ್ಕಾರದ ನಡವಳಿಗಳು

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗು ರೇಷ್ಮೆ ನಿರ್ದೇಶಕರ ಆಪ್ತ ಶಾಖೆ
ದಿನಾಂಕ: 23/8/17
ಸಹಿ:

ವಿಷಯ: ಮೈಸೂರು ಬಿತ್ತನೆ ಪ್ರದೇಶದಲ್ಲಿ ಉತ್ಪಾದಿಸಲಾಗುತ್ತಿರುವ ಬಿತ್ತನೆ ಗೂಡುಗಳು ಬಿತ್ತನೆಗೆ ಯೋಗ್ಯವಾಗಿದ್ದು, ಬೇಡಿಕೆಯಿಲ್ಲದೆ ನೂಲು ಬಿಚ್ಚಾಣಿಕೆಗೆ ಮಾರಾಟವಾದಲ್ಲಿ ನೀಡಲಾಗುತ್ತಿರುವ ಬೋನಸ್ ದರವನ್ನು ಹೆಚ್ಚಿಸುವ ಕುರಿತು.

ಓದಲಾಗಿದೆ:

1) ಸರ್ಕಾರದ ಆದೇಶ ಸಂಖ್ಯೆ: ತೋಇ 60 ರೇಕೃವಿ 2013, ದಿನಾಂಕ 22-08-2013.
2) ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ಪತ್ರ ಸಂಖ್ಯೆ: ದ್ವಿವಿ/ಮೈಬಿವ/ಬೋನಸ್/ಹೆಚ್ಚಳ/23/2013-14, ದಿನಾಂಕ 07-04-2017

ಯೋಜನಾ ವಿಭಾಗ
ಸಂಖ್ಯೆ 172
ದಿನಾಂಕ 26/08/17
ಬೆಂಗಳೂರು

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ: (1)ರ ದಿನಾಂಕ 22-08-2013 ರಲ್ಲಿ ಶುದ್ಧ ಮೈಸೂರು ತಳಿ ಬಿತ್ತನೆ ಬೆಳೆಗಾರರ ಹಿತ ಕಾಪಾಡಲು ಮತ್ತು ಇವರನ್ನು ಶುದ್ಧ ಮೈಸೂರು ತಳಿ ಬಿತ್ತನೆ ಗೂಡಿನ ಸಾಕಾಣಿಕೆಯಲ್ಲೇ ಮುಂದುವರೆಸಿಕೊಂಡು ಹೋಗುವಂತೆ ಪ್ರೋತ್ಸಾಹಿಸಲು ಈ ಬಿತ್ತನೆ ಬೆಳೆಗಾರರು ಉತ್ಪಾದಿಸಿದ ಬಿತ್ತನೆ ಗೂಡುಗಳು ಬೇಡಿಕೆಯಿಲ್ಲದೆ ನೂಲು ಬಿಚ್ಚಾಣಿಕೆಗೆ ವಿಲೇವಾರಿಯಾದಲ್ಲಿ, ಪ್ರಸ್ತುತ ಪ್ರತಿ ಕೆ.ಜಿ.ಗೆ ರೂ.150.00ರಂತೆ ಬೋನಸ್‌ನ್ನು ಪಾವತಿಸಲು ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2)ರ ದಿನಾಂಕ 07-04-2017ರ ಪತ್ರದಲ್ಲಿ ಮೈಸೂರು ಬಿತ್ತನೆ ವಲಯದ ರೇಷ್ಮೆ ಬೆಳೆಗಾರರು, ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಸಲ್ಲಿಸಿರುವ ಮನವಿಯಲ್ಲಿ, ಪ್ರಸ್ತುತ ಬರಗಾಲದ ಪ್ರಯುಕ್ತ, ವಿದ್ಯುತ್ ಹಾಗೂ ನೀರಿನ ಸಮಸ್ಯೆ ಮತ್ತು ಕಾರ್ಮಿಕರ ಕೂಲಿ ಹಾಗೂ ಗೊಬ್ಬರ ಬೆಲೆ ಹೆಚ್ಚಳದಿಂದ ತಾವು ನಷ್ಟ ಅನುಭವಿಸುತ್ತಿದ್ದು, ಮೈಸೂರು ಬಿತ್ತನೆ ಪ್ರದೇಶದಲ್ಲಿ ಉತ್ತಮ ಗುಣಮಟ್ಟದ ಬಿತ್ತನೆ ಗೂಡುಗಳನ್ನು ಉತ್ಪಾದಿಸಿ ರೇಷ್ಮೆ ಉದ್ಯಮವನ್ನು ಉಳಿಸಲು ಪ್ರಸ್ತುತ ಪ್ರತಿ ಕೆ.ಜಿ.ಗೆ ನೀಡಲಾಗುತ್ತಿರುವ ಬೋನಸ್ ದರವನ್ನು ರೂ. 150.00 ರಿಂದ ರೂ. 250.00 ಗಳಿಗೆ ಹೆಚ್ಚಿಸಲು ವಿನಂತಿಸಿ ಕೊಂಡಿರುತ್ತಾರೆ.

ಮೈಸೂರು ಬಿತ್ತನೆ ವಲಯದ ಬೆಳೆಗಾರರು ಸಂಕಷ್ಟದ ದಿನಗಳನ್ನು ಎದುರಿಸುತ್ತಿದ್ದು, ಕಳೆದ 2-3 ವರ್ಷಗಳಿಂದ ಸರಿಯಾಗಿ ಮಳೆಯಾಗದೆ, ಕೊಳವೆ ಬಾವಿಗಳಲ್ಲಿ ಅಂತರ್ ಜಲ ಕುಸಿದಿರುವುದರಿಂದ, ರೇಷ್ಮೆ ಕೃಷಿ ಚಟುವಟಿಕೆಗಳನ್ನು ಅಗತ್ಯ ಸಮಯದಲ್ಲಿ ಕೈಗೊಳ್ಳಲು ಗೊಬ್ಬರ ಹಾಗೂ ಕೂಲಿ ದರಗಳ ಹೆಚ್ಚಳದಿಂದ ಪ್ರಸ್ತುತ ಶುದ್ಧ ಮೈಸೂರು ತಳಿ ಬಿತ್ತನೆ ಗೂಡಿನ ಉತ್ಪಾದನಾ ವೆಚ್ಚ ಪ್ರತಿ ಕೆ.ಜಿ.ಗೆ ರೂ.480.00 ರಿಂದ 490.00ಗಳಾಗಿರುತ್ತದೆಂದು ತಿಳಿಸಿ ಬಿತ್ತನೆ ಬೆಳೆಗಾರರು 2016-17ನೇ ಸಾಲಿನ ಅಕ್ಟೋಬರ್ 2016ನೇ ಮಾಹೆಯಿಂದ ಫೆಬ್ರವರಿ 2017ರ ಮಾಹೆಯವರೆಗೆ ಬಿತ್ತನೆ ಗೂಡನ್ನು ಪ್ರತಿ ಕೆ.ಜಿ.ಗೆ ರೂ.379.00 ರಿಂದ ರೂ.453.00 ಗಳಿಗೆ ಉತ್ಪಾದನಾ ವೆಚ್ಚಕ್ಕಿಂತ ಕಡಿಮೆ ದರದಲ್ಲಿ ಗೂಡು ಮಾರಾಟ ಮಾಡಿರುತ್ತಾರೆಂದು ತಿಳಿಸಿರುತ್ತಾರೆ. ಜನವರಿ 2017ರ ಮಾಹೆಯಲ್ಲಿನ ಬಿತ್ತನೆ ಗೂಡಿನ ಮಾರಾಟದ ದರವನ್ನು ಹಿಂದಿನ ವರ್ಷಕ್ಕೆ ಹೋಲಿಸಿದಾಗ ಪ್ರತಿ ಕೆ.ಜಿ.ಗೆ ರೂ.200.00ಗಳ ಕುಸಿತ ಕಂಡು ಬರುತ್ತದೆಂದು ತಿಳಿಸಿ (ಜನವರಿ 2016 : ಮಾರಾಟ ದರ ರೂ.580.00, ಜನವರಿ 2017: ಮಾರಾಟ ದರ ರೂ.388.00) ಮುಂಬರುವ ಮಾಹೆಗಳಲ್ಲಿಯೂ ಸಹ ಮಳೆಯ ಅಭಾವದಿಂದ ಶುದ್ಧ ಮೈಸೂರು ತಳಿ ಬಿತ್ತನೆ ಗೂಡುಗಳಿಗೆ ಉತ್ತಮ ಬೇಡಿಕೆ ಬರುವ ಸಂದರ್ಭಗಳು ಕಡಿಮೆ ಇರುವುದರಿಂದ ಶುದ್ಧ ಮೈಸೂರು ತಳಿ ಬಿತ್ತನೆ ಬೆಳೆಗಾರರು ಆತಂಕಕ್ಕೆ ಒಳಗಾಗಿ ಮನವಿ ಸಲ್ಲಿಸಿರುತ್ತಾರೆಂದು ತಿಳಿಸಿ, ಪ್ರಸ್ತುತ ಪ್ರತಿ ಕೆ.ಜಿ.ಗೆ

ಪು.ತಿ.ನೋ. . . .

ಪಾವತಿಸುತ್ತಿರುವ ಬೋನಸ್ ದರವನ್ನು ರೂ.150.00 ರಿಂದ ರೂ.200.00 ಕ್ಕೆ ಹೆಚ್ಚಿಸಿದಲ್ಲಿ;

1. ಬಿತ್ತನೆಗೆ ಮಾರಾಟವಾದಾಗ. ಬಿತ್ತನೆ ದರ ರೂ.400.00 ರೈತನಿಗೆ ರೂ.400/- ಗಳು ಪ್ರತಿ ಕೆ.ಜಿಗೆ ಸಿಗುತ್ತದೆಂದು.
2. ರೀಲಿಂಗ್‌ಗೆ ಮಾರಾಟವಾದಾಗ. ರೀಲಿಂಗ್ ದರ ರೂ.200.00 + ಬೋನಸ್ ದರ ರೂ.200.00 ಸೇರಿ ರೈತನಿಗೆ ಒಟ್ಟು ರೂ.400.00ಗಳು ಪ್ರತಿ ಕೆ.ಜಿಗೆ ಸಿಗುತ್ತದೆಂದು ತಿಳಿಸುತ್ತಾ.

ಬೋನಸ್ ದರವನ್ನು ಪ್ರತಿ ಕೆ.ಜಿಗೆ ರೂ.150.00 ರಿಂದ ರೂ.200.00 ಕ್ಕೆ ಹೆಚ್ಚಿಸಲು ರೇಷ್ಮೆ ಜಂಟಿ ನಿರ್ದೇಶಕರು. ಬಿತ್ತನೆ ಪ್ರದೇಶಗಳು. ಬಿಳಿದೇವಾಲಯ ಇವರು ಕೋರಿರುತ್ತಾರೆ.

ರಾಜ್ಯದಲ್ಲಿ ಮಿಶ್ರತಳಿ ಕಚ್ಚಾ ರೇಷ್ಮೆ ಉತ್ಪಾದನೆಗಾಗಿ ಅಗತ್ಯವಿರುವ ಮಿಶ್ರತಳಿ ಮೊಟ್ಟೆಗಳನ್ನು ಉತ್ಪಾದಿಸಲು ಅಗತ್ಯವಿರುವ ಗುಣಮಟ್ಟದ ಶುದ್ಧ ದ್ವಿತಳಿ ಮತ್ತು ಮೈಸೂರು ತಳಿ ಬಿತ್ತನೆ ಗೂಡುಗಳನ್ನು ನಿರಂತರವಾಗಿ ಪೂರೈಸಲು ದ್ವಿತಳಿ / ಮೈಸೂರು ತಳಿ ಬಿತ್ತನೆ ವಲಯದಲ್ಲಿ ಬಿತ್ತನೆ ಬೆಳೆಗಾರರನ್ನು ಇಲಾಖೆಯು ಗುರುತಿಸಿ. ರಾಜ್ಯದ ಹಾಗೂ ಹೊರ ರಾಜ್ಯದ ಬಿತ್ತನೆ ಕೋಠಿಗಳಿಗೆ ಸರಬರಾಜು ಮಾಡಿ, ರೋಗರಹಿತ ಮೊಟ್ಟೆಗಳನ್ನು ಉತ್ಪಾದನೆ ಮಾಡಲಾಗುತ್ತಿದೆ. ಶುದ್ಧ ಮೈಸೂರು ತಳಿ ಬಿತ್ತನೆ ವಲಯಕ್ಕೆ ಸೀಮಿತವಾದ ಕೆಲವು ವಿಶಿಷ್ಟವಾದ ಪ್ರಮುಖ ಅಂಶಗಳು ಈ ಕೆಳಕಂಡಂತಿದೆ:

1. ಮೈಸೂರು ಬಿತ್ತನೆ ವಲಯದ ರೇಷ್ಮೆ ಬೆಳೆಗಾರರು ಉತ್ಪಾದಿಸುತ್ತಿರುವ ಬಿತ್ತನೆ ಗೂಡುಗಳನ್ನು ಮಿಶ್ರ ತಳಿ ಮೊಟ್ಟೆಗಳ ಉತ್ಪಾದನೆಯಲ್ಲಿ ಮಾತ್ರ ಮೂಲವಾಗಿ ಉಪಯೋಗಿಸಿಕೊಳ್ಳಲಾಗುತ್ತಿದೆ. ರಾಜ್ಯದ ಮಿಶ್ರ ತಳಿ ಮೊಟ್ಟೆಗಳ ಉತ್ಪಾದನೆಗಾಗಿ ಹಾಗೂ ಉದ್ಯಮದ ಅಭಿವೃದ್ಧಿಗಾಗಿ ಹಾಲಿ ಇರುವ ಮೈಸೂರು ಬಿತ್ತನೆ ವಲಯದ ರೇಷ್ಮೆ ಬೆಳೆಗಾರರನ್ನು ಶುದ್ಧ ಮೈಸೂರು ತಳಿ ಸಾಕಾಣಿಕೆಯಲ್ಲಿಯೇ ಉಳಿಸಿಕೊಳ್ಳುವುದು ಅತಿ ಅವಶ್ಯಕವಾಗಿರುತ್ತದೆ.

2. ಶುದ್ಧ ಮೈಸೂರು ತಳಿಯನ್ನು ವಿಶೇಷವಾಗಿ ಅಧಿಸೂಚಿತ ಬಿತ್ತನೆ ಪ್ರದೇಶದಲ್ಲಿ ಬೆಳೆಸಲಾಗುತ್ತಿದ್ದು ಮಿಶ್ರ ತಳಿ ಪ್ರದೇಶದ ರೇಷ್ಮೆ ಬೆಳೆಗಾರರಿಗೆ ಹೋಲಿಸಿದಲ್ಲಿ, ಇಲ್ಲಿನ ರೇಷ್ಮೆ ಬೆಳೆಗಾರರು ಸಣ್ಣ ಮತ್ತು ಅತಿ ಸಣ್ಣ ಹಿಡುವಳಿದಾರರಾಗಿದ್ದು, ಒಬ್ಬ ರೈತನಿಗೆ ಸರಾಸರಿ 0.20 ಎಕರೆ ಹಿಪ್ಪುನೇರಳೆ ವಿಸ್ತೀರ್ಣವಿದ್ದು ಆರ್ಥಿಕವಾಗಿ ತುಂಬಾ ಹಿಂದುಳಿದಿರುತ್ತಾರೆ.

3. ರೇಷ್ಮೆ ಹುಳು ಸಾಕಾಣಿಕೆಯ ಅವಧಿಯನ್ನು ಪರಿಗಣಿಸಿದಲ್ಲಿ, ಮಿಶ್ರ ತಳಿ ಸಾಕಾಣಿಕಾ ಅವಧಿಗಿಂತ ಸುಮಾರು 5 ದಿನಗಳು ಅಧಿಕವಾಗಿದ್ದು ಈ ಶುದ್ಧ ಮೈಸೂರು ತಳಿಯನ್ನು ಹೆಚ್ಚಿನ ಮುತುವರ್ಜಿ ಹಾಗೂ ಪರಿಶ್ರಮದಿಂದ ಸಾಕಾಣಿಕೆ ಮಾಡಬೇಕಾಗಿದ್ದು ಈ ಬೆಳೆಗಳನ್ನು ರೋಗರುಜಿನಗಳಿಂದ ಹಾಗೂ ಕೀಟಬಾಧೆಗಳಿಂದ ಕಾಪಾಡುವ ಅವಶ್ಯಕತೆ ಇರುತ್ತದೆ. ಈ ಶುದ್ಧ ಮೈಸೂರು ತಳಿಯಲ್ಲಿ 100 ಮೊಟ್ಟೆಗಳಿಗೆ ದೊರೆಯುವ ಸರಾಸರಿ ಇಳುವರಿ ಹಾಗೂ ಈ ಬಿತ್ತನೆ ಗೂಡುಗಳ ಮಾರಾಟದಿಂದ ದೊರೆಯುವ ಆದಾಯ, ಮಿಶ್ರತಳಿ ಮೊಟ್ಟೆಗಳ ಸಾಕಾಣಿಕೆಯಿಂದ ಬರುವ ಆದಾಯಕ್ಕಿಂತ ಕಡಿಮೆ ಇರುತ್ತದೆ. ಶುದ್ಧ ಮೈಸೂರು ತಳಿ ಹಾಗೂ ಮಿಶ್ರ ತಳಿ ಮೊಟ್ಟೆಗಳ ಸಾಕಾಣಿಕಾ ಅವಧಿ. ಪಡೆಯುವ ಸರಾಸರಿ ಇಳುವರಿ. ಹಾಗೂ ಪ್ರತಿ ಕೆ.ಜಿ.ಯ ಮಾರಾಟ ದರ ಮತ್ತು ಪಡೆಯಬಹುದಾದ ಆದಾಯದ ವಿವರಗಳು ಕೆಳಕಂಡಂತಿವೆ.

ಪು.ತಿ.ನೋ. . . .

| ಮಿಶ್ರತಳಿ ಮತ್ತು ಶುದ್ಧ ಮೈಸೂರು ತಳಿ 100 ಮೊಟ್ಟೆಗಳ ಸಾಕಾಣಿಕೆಯಿಂದ ದೊರೆಯುವ ಆದಾಯದ ವಿವರಗಳು | | | | | | |
|---|---|---|---|---|---|---|
| ತಳಿ | ಸಾಕಾಣಿಕಾ ಅವಧಿ (ದಿನಗಳಲ್ಲಿ) | ಸರಾಸರಿ ಇಳುವರಿ (ಕೆ.ಜಿ.ಗಳಲ್ಲಿ) | ದರ (ರೂ.ಗಳಲ್ಲಿ) | | ದೊರೆಯುವ ಒಟ್ಟು ಆದಾಯ (ರೂ.ಗಳಲ್ಲಿ) | |
| | | | ಚಿತ್ತನೆಗೆ | ನೂಲು ಬಿಚ್ಚಾಣಿಕೆಗೆ | ಚಿತ್ತನೆಗೆ | ನೂಲು ಬಿಚ್ಚಾಣಿಕೆಗೆ |
| ಮಿಶ್ರತಳಿ | 23 ರಿಂದ 25 | 70 | 0 | 346 | 0 | 24220 |
| ಶುದ್ಧ ಮೈಸೂರು ತಳಿ | 28 ರಿಂದ 30 | 39 | 453 | 203 | 17667 | 7917 |

ಮಿಶ್ರ ತಳಿ ಬೆಳೆಗಾರರಿಗೆ. ಪ್ರತಿ 100 ಮಿಶ್ರ ತಳಿ ಮೊಟ್ಟೆಗಳ ಸಾಕಾಣಿಕೆಯಿಂದ ಪ್ರತಿ ಬೆಳೆಗೆ ರೂ.24,220.00ಗಳ ಅದಾಯ ದೊರೆಯುತ್ತಿದ್ದು. ಶುದ್ಧ ಮೈಸೂರು ತಳಿ ಚಿತ್ತನೆ ಬೆಳೆಗಾರರು ಬೆಳೆದ ಎಲ್ಲಾ ಗೂಡುಗಳು ಚಿತ್ತನೆಗೆ ವಿಲೇವಾರಿಯಾದಾಗ ಮಾತ್ರ ಸರಾಸರಿ ಚಿತ್ತನೆ ಗೂಡಿನ ದರ ರೂ.453.00 ಇದ್ದು, ಒಟ್ಟಾರೆ ಪ್ರತಿ ಬೆಳೆಗೆ ರೂ.17,667.00ಗಳ ಆದಾಯ ಮಾತ್ರ ದೊರೆಯುತ್ತದೆ. ಈ ಪರಿಸ್ಥಿತಿಯಲ್ಲಿ ಶುದ್ಧ ಮೈಸೂರು ತಳಿ ಚಿತ್ತನೆ ಬೆಳೆಗಾರರಿಗೆ ಪ್ರತಿ ಬೆಳೆಗೆ ಮಿಶ್ರತಳಿ ಬೆಳೆಗಾರರಿಗೆ ದೊರೆಯುವ ಆದಾಯಕ್ಕಿಂತ ರೂ.6,553.00ಗಳ ಕಡಿಮೆ ಆದಾಯ ದೊರೆಯುತ್ತದೆ.

4. ಶುದ್ಧ ಮೈಸೂರು ತಳಿ ಚಿತ್ತನೆ ಬೆಳೆಗಾರರು ಬೆಳೆದ ಚಿತ್ತನೆ ಗೂಡುಗಳು ಎಲ್ಲಾ ಕಾಲದಲ್ಲಿಯೂ ಪೂರ್ಣ ಪ್ರಮಾಣದಲ್ಲಿ ಚಿತ್ತನೆಗೆ ವಿಲೇವಾರಿಯಾಗದೇ ಇರುವುದರಿಂದ, ಎಲ್ಲಾ ಸಮಯದಲ್ಲೂ ಮಿಶ್ರ ತಳಿ ಬೆಳೆಗಾರರಿಗಿಂತ ಹೆಚ್ಚು ನಷ್ಟ ಅನುಭವಿಸುತ್ತಿದ್ದಾರೆ. 2016-17 ಹಾಗೂ 2015-16ನೇ ಸಾಲುಗಳಲ್ಲಿ ಏಪ್ರಿಲ್ ನಿಂದ ಮಾರ್ಚ್ ಮಾಹೆಯವರೆಗೆ ವಿವಿಧ ಮಾಹೆಗಳಲ್ಲಿ ವರ್ಷವಾರು ಚಿತ್ತನೆಗೆ ವಿಲೇವಾರಿಯಾದ ಚಿತ್ತನೆ ಗೂಡುಗಳ ಶೇಕಡಾ ಪ್ರಮಾಣವನ್ನು ಗಮನಿಸಿದಾಗ ಈ ವಿಷಯವು ಹೆಚ್ಚು ಸ್ಪಷ್ಟವಾಗುತ್ತದೆ. ಈ ಕಾರಣಗಳಿಂದ ಶುದ್ಧ ಮೈಸೂರು ತಳಿ ಸಾಕಾಣಿಕೆಯು ಹೆಚ್ಚು ಲಾಭದಾಯಕವಲ್ಲವೆಂದು ಮನಗಂಡು ಶುದ್ಧ ಮೈಸೂರು ಚಿತ್ತನೆ ಬೆಳೆಗಾರರು ಮಿಶ್ರ ತಳಿ ಚಾಕಿ / ಗೂಡು ಉತ್ಪಾದನೆ ಕಡೆಗೆ ಇತ್ತೀಚೆಗೆ ಹೆಚ್ಚಿನ ಆಸಕ್ತಿ ತೋರುತ್ತಿರುತ್ತಾರೆ. ಈ ರೀತಿಯ ಬದಲಾವಣೆಯಿಂದ ಮುಂದಿನ ದಿನಗಳಲ್ಲಿ ಬೇಡಿಕೆಗೆ ತಕ್ಕಂತೆ ಶುದ್ಧ ಮೈಸೂರು ತಳಿ ಚಿತ್ತನೆ ಗೂಡುಗಳನ್ನು ಉತ್ಪಾದಿಸಲಾಗದೆ ರೇಷ್ಮೆ ಉದ್ಯಮಕ್ಕೆ ಧಕ್ಕೆಯಾಗುವ ಸಂಭವ ಹೆಚ್ಚಾಗಿರುತ್ತದೆ.

5. ಡಾ.ಬಸವರಾಜ.ಹೆಚ್ ರವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ರೇಷ್ಮೆಗೂಡು, ಕಚ್ಚಾ ರೇಷ್ಮೆ ಉತ್ಪಾದನೆ, ಧಾರಣೆ ಹಾಗೂ ಮಾರಾಟ ವ್ಯವಸ್ಥೆಯ ಸಮಗ್ರ ಅಧ್ಯಯನ ತಾಂತ್ರಿಕ ಸಮಿತಿಯ ವರದಿಯಲ್ಲಿಯೂ ಸಹ ಮೈಸೂರು ಚಿತ್ತನೆ ವಲಯದ ರೇಷ್ಮೆ ಬೆಳೆಗಾರರ ಹಿತ ಕಾಪಾಡಲು ಮೈಸೂರು ತಳಿ ಚಿತ್ತನೆ ಗೂಡಿನ ವೈಜ್ಞಾನಿಕ ಆಧಾರಿತ ಉತ್ಪಾದನಾ ವೆಚ್ಚ ಪ್ರತಿ ಕೆ.ಜಿ.ಗೆ ರೂ.498.00 ಇರುವ ಹಿನ್ನಲೆಯಲ್ಲಿ, ಪ್ರಸ್ತುತ ಪ್ರತಿ ಕೆ.ಜಿ.ಗೆ ಪಾವತಿಸಲಾಗುತ್ತಿರುವ ಬೋನಸ್ ಮೊತ್ತವನ್ನು ರೂ.150.00 ರಿಂದ ರೂ.200.00ಗಳಿಗೆ ಹೆಚ್ಚಿಸಲು ಶಿಫಾರಸ್ಸು ಮಾಡಿರುತ್ತಾರೆ.

6. ಪ್ರಸ್ತುತ. ಲೆಕ್ಕಶೀರ್ಷಿಕೆ 2851-00-107-1-48(106) ರಡಿ ಬೋನಸ್ ಬಾಬ್ತಿಗಾಗಿ 2015-16ನೇ ಸಾಲಿನಲ್ಲಿ ರೂ.429.00 ಲಕ್ಷಗಳನ್ನು ಪಾವತಿಸಲಾಗಿದೆ. 2016-17ನೇ ಸಾಲಿನಲ್ಲಿ ಜನವರಿ-2017ರ ಅಂತ್ಯದವರೆಗೆ ರೂ. 341.831 ಲಕ್ಷಗಳನ್ನು ಪಾವತಿಸಲಾಗಿದ್ದು, ಫೆಬ್ರವರಿ-2017 ಹಾಗೂ ಮಾರ್ಚ್-2017

ಪು.ತಿ.ನೋ. . . .

ಮಾಹೆಗಳಿಗೆ ಅಂದಾಜು ರೂ. 80.20 ಲಕ್ಷಗಳನ್ನು ಪ್ರತಿ ಕೆ.ಜಿ.ಗೆ ಹಾಲಿ ಇರುವ ದರ ರೂ.150.00 ರಂತೆ ಪಾವತಿಸಬೇಕಾಗುತ್ತದೆ.

7. ಶುದ್ಧ ಮೈಸೂರುತಳಿ ಚಿತ್ತನೆ ಬೆಳೆಗಾರರ ಮನವಿಯನ್ನು ಪುರಸ್ಕರಿಸಿ ಬೋನಸ್ ದರವನ್ನು ಪ್ರತಿ ಕೆ.ಜಿಗೆ ರೂ.150.00 ರಿಂದ ರೂ.175.00 ಗಳಿಗೆ ಪರಿಷ್ಕರಿಸಿದಲ್ಲಿ, ಹೆಚ್ಚುವರಿಯಾಗಿ ರೂ.72.25 ಲಕ್ಷಗಳ ಅಧಿಕ ವಂಟನೆಯನ್ನು 2017-18ನೇ ಸಾಲಿನ ಆಯವ್ಯಯದಲ್ಲಿ ಮೀಸಲಿಡಬೇಕಾಗುತ್ತದೆ. ವಿವರಗಳು ಕೆಳಕಂಡಂತಿದೆ.

**<u>ಮೈಸೂರು ತಳಿ ಚಿತ್ತನೆ ಗೂಡುಗಳಿಗೆ ಪಾವತಿಸುತ್ತಿರುವ ಬೋನಸ್ ಹಾಗೂ ಪ್ರಸ್ತಾಪಿತ ಪರಿಷ್ಕರಣೆಯ ವಿವರಗಳು</u>**

(ರೂ. ಲಕ್ಷಗಳಲ್ಲಿ)

| ವಿವರ | ಪ್ರಸ್ತುತ ಪಾವತಿಸುತ್ತಿರುವ ದರ ಪ್ರತಿ ಕೆ.ಜಿ.ಗೆ (ರೂ. ಗಳಲ್ಲಿ) | ವೆಚ್ಚದ ವಿವರಗಳು: 2015-16 | | ವೆಚ್ಚದ ವಿವರಗಳು: 2016-17 (ಫೆಬ್ರವರಿ ಮತ್ತು ಮಾರ್ಚ್ ಅಂದಾಜು ವೆಚ್ಚ ಸೇರಿದಂತೆ) | | ಪ್ರಸ್ತಾಪಿಸಿರುವ ದರ ಹೆಚ್ಚಳ ಪ್ರತಿ ಕೆ.ಜಿ.ಗೆ ರೂ.ಗಳಲ್ಲಿ | ಪ್ರಸ್ತಾಪಿಸಿರುವ ಹೆಚ್ಚಳದಿಂದ 2017-18ನೇ ಸಾಲಿನ ಆಯವ್ಯಯದಲ್ಲಿ ಬೇಕಾಗಬಹುದಾದ ವಂಟನೆ (ರೂ.ಲಕ್ಷಗಳಲ್ಲಿ) | | | |
|---|---|---|---|---|---|---|---|---|---|---|
| | | ಪ್ರಮಾಣ (ಮೆ.ಟನ್‌ಗಳಲ್ಲಿ) | ಬೋನಸ್ (ರೂ.ಲಕ್ಷಗಳಲ್ಲಿ) | ಪ್ರಮಾಣ (ಮೆ.ಟನ್‌ಗಳಲ್ಲಿ) | ಬೋನಸ್ (ರೂ.ಲಕ್ಷಗಳಲ್ಲಿ) | | ಪ್ರಮಾಣ (ಮೆ.ಟನ್‌ಗಳಲ್ಲಿ) | ಪ್ರತಿ ಕೆ.ಜಿ.ಗೆ ಪ್ರಸ್ತುತ ರೂ.150 ರಂತೆ ಬೋನಸ್ ಬೇಕಾಗುವ ಮೊತ್ತ | ಪ್ರತಿ ಕೆ.ಜಿ.ಗೆ ಪ್ರಸ್ತಾಪಿತ ರೂ.175.00 ರಂತೆ ಬೋನಸ್ ಬೇಕಾಗುವ ಮೊತ್ತ | ಪ್ರಸ್ತಾಪಿತ ಹೆಚ್ಚುವರಿ ಬೋನಸ್ |
| ಮೈಸೂರು ತಳಿ ಚಿತ್ತನೆ ಗೂಡುಗಳು ನೂಲು ಬಿಚ್ಚಾಣಿಕೆಗೆ ವಿಲೇವಾರಿ ಯಾದರೆ. ನೀಡುತ್ತಿರುವ ಬೋನಸ್ | 150.00 | 286.00 | 429.00 | 281.22 | 421.83 | 175.00 | 289.00 | 433.50 | 505.75 | 72.25 |

ಶುದ್ಧ ಮೈಸೂರು ತಳಿ ಚಿತ್ತನೆ ಬೆಳೆಗಾರರ ಹಿತ ಕಾಪಾಡುವ ದೃಷ್ಟಿಯಿಂದ ಹಾಗೂ ಇವರನ್ನು ಶುದ್ಧ ಮೈಸೂರು ತಳಿ ಚಿತ್ತನೆ ಸಾಕಾಣಿಕೆಯಲ್ಲೇ ಮುಂದುವರೆಸಿಕೊಂಡು ಹೋಗಲು ಪ್ರೋತ್ಸಾಹಿಸುವ ಸಲುವಾಗಿ ಹಾಗೂ ಉದ್ಯಮದ ಸರ್ವತೋಮುಖ ಅಭಿವೃದ್ಧಿ ಹಿತದೃಷ್ಟಿಯಿಂದ ಪ್ರಸ್ತುತ, ಪ್ರತಿ ಕೆ.ಜಿ.ಗೆ ಪಾವತಿಸಲಾಗುತ್ತಿರುವ ಬೋನಸ್ ದರವನ್ನು ರೂ.150.00 ರಿಂದ ರೂ.175.00ಗಳಿಗೆ ಹೆಚ್ಚಿಸುವುದರಿಂದ ಒಟ್ಟಾರೆ ರೂ.505.75 ಲಕ್ಷಗಳ ವಂಟನೆಯು ಲೆಕ್ಕಶೀರ್ಷಿಕೆ 2851-00-107-1-48(106)ರಡಿ 2017-18ನೇ ಸಾಲಿಗೆ ಅಗತ್ಯವಿರುತ್ತದೆ ಹಾಗೂ ಈ ಅನುದಾನವನ್ನು ಇಲಾಖೆಗೆ 2017-18ನೇ ಸಾಲಿನ ಸದರಿ ಲೆಕ್ಕ ಶೀರ್ಷಿಕೆಯಡಿ ಒದಗಿಸಿರುವ ಒಟ್ಟಾರೆ ಅನುದಾನದಲ್ಲಿ ವೆಚ್ಚವನ್ನು ಭರಿಸಲಾಗುವುದು. ಈ ಹಿನ್ನಲೆಯಲ್ಲಿ, ಶುದ್ಧ ಮೈಸೂರು ತಳಿ ಚಿತ್ತನೆ ಬೆಳೆಗಾರರು ಉತ್ಪಾದಿಸಿದ ಚಿತ್ತನೆ ಗೂಡುಗಳು ಬೇಡಿಕೆಯಿಲ್ಲದೆ ನೂಲು ಬಿಚ್ಚಾಣಿಕೆಗೆ ವಿಲೇವಾರಿಯಾದಾಗ ಪ್ರಸ್ತುತ ಪಾವತಿಸಲಾಗುತ್ತಿರುವ ಬೋನಸ್ ದರವನ್ನು ಪ್ರತಿ ಕೆ.ಜಿ.ಗೆ ರೂ.150.00 ರಿಂದ ರೂ.175.00 ಗಳಿಗೆ ಹೆಚ್ಚಿಸಿ ಸೂಕ್ತ ಆದೇಶವನ್ನು ಹೊರಡಿಸುವಂತೆ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು ಕೋರಿರುತ್ತಾರೆ.

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು, ಶುದ್ಧ ಮೈಸೂರು ತಳಿ ಚಿತ್ತನೆ ಗೂಡುಗಳಿಗೆ ಪ್ರಸ್ತುತ ನೀಡುತ್ತಿರುವ ಬೋನಸ್ ದರವನ್ನು ಪ್ರತಿ ಕೆ.ಜಿ.ಗೆ ರೂ. 150/- ರಿಂದ ರೂ. 175/- ಕ್ಕೆ ಹೆಚ್ಚಿಸಲು ಮತ್ತು ಯಾವುದೇ ಹೆಚ್ಚುವರಿ

ಮು.ತಿ.ನೋ. . . .

ಅನುದಾನ ಕೋರಬಾರದೆಂಬ ಷರತ್ತನ್ನುವಿಧಿಸಲು ಸರ್ಕಾರವು ನಿರ್ಧರಿಸಿರುವ ಕಾರಣ. ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ : ತೋಇ 99 ರೇಕೃವಿ 2017,**

**ಬೆಂಗಳೂರು, ದಿನಾಂಕ : 23-08-2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶುದ್ಧ ಮೈಸೂರು ತಳಿ ಬಿತ್ತನೆ ಗೂಡುಗಳಿಗೆ ಪ್ರಸ್ತುತ ನೀಡುತ್ತಿರುವ ಬೋನಸ್ ದರವನ್ನು ಹೆಚ್ಚಿಸುವ ಪ್ರಸ್ತಾವನೆಗೆ ಯಾವುದೇ ಹೆಚ್ಚುವರಿ ಅನುದಾನ ಕೋರಬಾರದೆಂಬ ಷರತ್ತಿಗೊಳಪಟ್ಟು, ಪ್ರತಿ ಕೆ.ಜಿ.ಗೆ ರೂ. 150/- ರಿಂದ ರೂ. 175/- ಕ್ಕೆ ಹೆಚ್ಚಿಸಿ ಸರ್ಕಾರವು ಆದೇಶಿಸಿದೆ.

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿ 40 ಎಫ್‌ಆರ್‌ಓ 2017, ದಿನಾಂಕ 03-06-2017 ಮತ್ತು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 407 ವೆಚ್ಚ-4/2017, ದಿನಾಂಕ 08-08-2017 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

23/8
(ಆರ್.ಎಲ್. ಚಿನ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ (ರೇಷ್ಮೆ)
ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ

**ಇವರಿಗೆ:**

1. ಮಹಾಲೇಖಪಾಲರು, (ಜಿ&ಎಸ್‌ಎಸ್‌ಎ)/(ಇ&ಆರ್‌ಎಸ್‌ಎ)/(ಎ&ಇ) ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ಹಿರಿಯ ನಿರ್ದೇಶಕರು, ಯೋಜನಾ ಇಲಾಖೆ (ಪಿ.ಎಫ್.ಆರ್. ವಿಭಾಗ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
6. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನ ಸೌಧ, ಬೆಂಗಳೂರು.
7. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
8. ~~ಸರ್ಕಾರದ~~ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು (ರೇಷ್ಮೆ), ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
9. ಶಾಖಾ ರಕ್ಷಾ ಕಡತ.